ದಿಃ 25.06.2025

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ,
ಹೊಳಲ್ಕೆರೆ.

ಸಿ ಸಿ ನಂಃ 1018/2023

| | | | | | |
|---|---|---|---|---|---|
| ಸಾಕ್ಷಿದಾರರ ಹೆಸರು | : | ಅರುಣ್ ಕುಮಾರ್ | ಪಿ.ಡಬ್ಲ್ಯೂ | : | 1 |
| ತಂದೆಯ ಹೆಸರು | : | ಬಸವರಾಜಪ್ಪ | ಸಿ.ಡಬ್ಲ್ಯೂ. | : | 1 |
| ವಯಸ್ಸು | : | 24 ವರ್ಷ | ದಿನಾಂಕ | : | 25.06.2025 |
| ಉದ್ಯೋಗ | : | ಕೂಲಿಕೆಲಸ | | | |
| ವಾಸಸ್ಥಳ | : | ಹೊಳಲ್ಕೆರೆ | | | |

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ ರವರಿಂದಃ

ನ್ಯಾಯಾಲಯದ ಮುಂದೆ ಇರುವ ಆರೋಪಿ ನನಗೆ ಗೊತ್ತಿಲ್ಲ. ಚಾಸಾ–**2,3** ಮತ್ತು **8** ಗೊತ್ತಿಲ್ಲ.

ಸಾಕ್ಷಿಗೆ ಈ ಹಂತದಲ್ಲಿ ಒಂದು ದಾಖಲೆಯನ್ನು ತೋರಿಸಿದ್ದು, ಸದರಿ ದಾಖಲೆಯು ದಿಃ**12.04.2023** ರಂದು ಪಂಚರಾದ ನಮಗೆ ನೀಡಿದ ನೋಟೀಸ್ ಆಗಿದ್ದು, ಸದರಿ ದಾಖಲೆಯಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿ ದಾಖಲೆಯನ್ನು ನಿಪಿ–**1** ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ–**1**(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಈ ಹಂತದಲ್ಲಿ ಇನ್ನೊಂದು ದಾಖಲೆಯನ್ನು ತೋರಿಸಿದ್ದು, ಸದರಿ ದಾಖಲೆಯು ದಿಃ**12.04.2023** ರಂದು ಪಂಚರಾದ ನಮಗೆ ನೀಡಿದ ಶೋಧನ ಸಮುಚಿತ ವಾರೆಂಟ್ ಆಗಿದ್ದು, ಸದರಿ ದಾಖಲೆಯಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿ ದಾಖಲೆಯನ್ನು ನಿಪಿ–**2** ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ–**2**(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಈ ಹಂತದಲ್ಲಿ ಇನ್ನೊಂದು ದಾಖಲೆಯನ್ನು ತೋರಿಸಿದ್ದು, ಸದರಿ ದಾಖಲೆಯು ದಿಃ**12.04.2023** ರಂದು ವಶಪಡಿಸಿಕೊಂಡ ಸ್ವತ್ತಿನ ಪಟ್ಟಿಯಾಗಿದ್ದು, ಸದರಿ ದಾಖಲೆಯಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿ ದಾಖಲೆಯನ್ನು ನಿಪಿ–**3** ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ–**3**(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಈ ಹಂತದಲ್ಲಿ ಇನ್ನೊಂದು ದಾಖಲೆಯನ್ನು ತೋರಿಸಿದ್ದು, ಸದರಿ ದಾಖಲೆಯು ದಿಃ**12.04.2023** ರಂದು ತಯಾರಿಸಿದ ಮಾದರಿ ಮೊಹರಿನ ನಕಲಾಗಿದ್ದು, ಸದರಿ ದಾಖಲೆಯನ್ನು

ದಿಃ 25.06.2025

ಮತ್ತು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ–**4** ಮತ್ತು ನಿಪಿ–**4**(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಈ ಹಂತದಲ್ಲಿ ಇನ್ನೊಂದು ದಾಖಲೆಯನ್ನು ತೋರಿಸಿದ್ದು, ಸದರಿ ದಾಖಲೆಯು ಸ್ಥಳದ ಪಂಚನಾಮೆಯಾಗಿದ್ದು, ಸದರಿ ದಾಖಲೆಯಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿ ದಾಖಲೆಯನ್ನು ನಿಪಿ–**5** ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ–**5**(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಈ ಹಂತದಲ್ಲಿ ಇನ್ನೊಂದು ದಾಖಲೆಯನ್ನು ತೋರಿಸಿದ್ದು, ಸದರಿ ದಾಖಲೆಯು ದಿಃ**12.04.2023** ರಂದು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಜಪ್ತು ಪಡಿಸಿದ ವಸ್ತುಗಳನ್ನು ನಮೂದಿಸಿರುವ ಅನುಬಂಧ–**1** ಆಗಿದ್ದು, ಸದರಿ ದಾಖಲೆಯಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿ ದಾಖಲೆಯನ್ನು ನಿಪಿ–**6** ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ–**6**(ಎ) ಎಂದು ಗುರುತಿಸಲಾಯಿತು.

ಸಾಕ್ಷಿಯು ಮುದ್ದೆ ಮಾಲಿನ ಮೇಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಎಂ.ಓ–**1** ಎಂದು ಮತ್ತು ಸಾಕ್ಷಿಯ ಸಹಿಯನ್ನು ಎಂ.ಓ.**1**(ಎ) ಎದು ಗುರುತಿಸಲಾಯಿತು.

ನಿಪಿ–1 ರಿಂದ 5 ಮತ್ತು ಎಂ.ಓ.1 ಕ್ಕೆ ಈಗ್ಗೆ ಸುಮಾರು 2 ವರ್ಷಗಳ ಹಿಂದೆ ಅಬಕಾರಿ ಪೊಲೀಸ್ ಠಾಣೆಯಲ್ಲಿ ಅಬಕಾರಿ ಪೊಲೀಸ್ ಠಾಣೆಯ ಪೊಲೀಸರ ಕೋರಿಕೆಯ ಮೇರೆಗೆ ಸಹಿ ಮಾಡಿರುತ್ತೇನೆ. ನನ್ನ ಸಮಕ್ಷಮ ಸದರಿ ನಿಪಿ–2 ರಿಂದ 5 ಮತ್ತು ಎಂ.ಓ.1 ಕ್ಕೆ ಚಾಸಾ–2 ರವರು ಸಹಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ ಮತ್ತು ಯಾವುದೇ ವಸ್ತುಗಳನ್ನು ವಶಪಡಿಸಿಕೊಂಡಿಲ್ಲ. ನಿಪಿ.5 ರಲ್ಲಿ ಏನು ಬರೆದಿದೆ ಎಂಬುದು ನನಗೆ ಗೊತ್ತಿಲ್ಲ ಮತ್ತು ಪೊಲೀಸರು ನನಗೆ ಓದಿ ಹೇಳಿಲ್ಲ ಮತ್ತು ಪೊಲೀಸರು ಮುಂದೆ ಯಾವುದೇ ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಸಾಕ್ಷಿಯು ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿಯುತ್ತಿದ್ದು, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರುತ್ತಾರೆ. ಅನುಮತಿ ನೀಡಲಾಯಿತು)

## ಪಾಟೀ ಸವಾಲುಃ ಮಾನ್ಯ ಸ.ಸ.ಅ ರವರಿಂದಃ

ದಿ:12.04.2023 ರಂದು ರಾತ್ರಿ 07.00 ಗಂಟೆ ಸಮಯದಲ್ಲಿ ನಾನು ಹೊಳಲ್ಕೆರೆ

ದಿಃ 25.06.2025

ಟೌನ್ ಖಾಸಗಿ ಬಸ್ ನಿಲ್ದಾಣದ ಮುಂಭಾಗದ ಹೊಸದುರ್ಗಕ್ಕೆ ಹೋಗುವ ರಸ್ತೆಯ ಬಳಿ ನಿಂತಿದ್ದಾಗ ಚಾಸಾ–8 ರವರು ಅಲ್ಲಿಗೆ ಬಂದು ತಮ್ಮನ್ನು ಪರಿಚಯ ಮಾಡಿಕೊಂಡರು ಎಂದರೆ ಸರಿಯಲ್ಲ. ನಂತರ ಚಾಸಾ–8 ರವರು ನಮ್ಮ ಗ್ರಾಮದ ಹುಸೇನ್ ತಂದೆ ಲೇಟ್ ರಹಿಮಾನ್ಸಾಬ್ ಎಂಬುವವರ ತನ್ನ ಆಟೋದಲ್ಲಿ ಅಕ್ರಮವಾಗಿ ಮಧ್ಯವನ್ನು ಸಂಗ್ರಹಿಸಿಟ್ಟು ಮಾರಾಟ ಮಾಡುತ್ತಿರುವ ಬಗ್ಗೆ ಮಾಹಿತಿ ಬಂದಿದೆ ಎಂದು ನಮಗೆ ತಿಳಿಸಿದರು ಎಂದರೆ ಸರಿಯಲ್ಲ. ನಂತರ ಚಾಸಾ–8 ರವರು ನಮಗೆ ಸದರಿ ಆಟೋದ ಶೋಧ ನೆಡೆಸಬೇಕು ಎಂದು ತಿಳಿಸಿ ನಾವು ಒಪ್ಪಿದ ಮೇರೆಗೆ ನಿಪಿ–1 ರಂತೆ ನೋಟೀಸ್ ಅನ್ನು ನಮಗೆ ಜಾರಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಂತರ ನಾನು ಮತ್ತು ಚಾಸಾ–2 ರಿಂದ 4 ಮತ್ತು 8 ರವರು ಸದರಿ ಮಾಹಿತಿ ಬಂದ ಸ್ಥಳಕ್ಕೆ ಹೋದೆವು ಎಂದರೆ ಸರಿಯಲ್ಲ. ನಂತರ ಸದರಿ ಸ್ಥಳದಲ್ಲಿ ನಿಪಿ–2 ಕ್ಕೆ ನಮ್ಮ ಸಹಿ ಪಡೆದರು ಎಂದರೆ ಸರಿಯಲ್ಲ. ನಂತರ ಸದರಿ ಸ್ಥಳದಲ್ಲಿ ಅಬಕಾರಿ ಅಧಿಕಾರಿ ನಾನು, ಚಾಸಾ–2 ರಿಂದ 4 ಮತ್ತು 8 ರವರು ಪರಸ್ಪರ ಅಂಗಶೋಧನೆ ಮಾಡಿಕೊಂಡು ಸದರಿ ಆಟೋವನ್ನು ಪರಿಶೀಲನೆ ಮಾಡಿದರು ಎಂದರೆ ಸರಿಯಲ್ಲ. ಸದರಿ ಆಟೋದಲ್ಲಿ ಆಟೋ ಚಾಲಕನು ಹಿಂಬದಿಯ ಸೀಟಿನ ಮೇಲೆ ಒಂದು ಬಿಳಿಯ ಪ್ಲಾಸ್ಟಿಕ್ ಚೀಲವನ್ನು ಇಟ್ಟಿರುವುದು ಕಂಡು ಬಂದಿದ್ದು, ಅಧಿಕಾರಿಗಳು ಚೀಲದಲ್ಲಿ ಏನಿದೆ ಎಂದು ಕೇಳಿದಾಗ ಆಟೋ ಚಾಲಕ ಗಾಬರಿಯಿಂದ ನಿಂತಿದ್ದನು ಎಂದರೆ ಸರಿಯಲ್ಲ. ನಂತರ ನಮ್ಮ ಸಮಕ್ಷಮ ಸದರಿ ಪ್ಲಾಸ್ಟಿಕ್ ಚೀಲವನ್ನು ತೆರೆದು ನೋಡಲಾಗಿ ಮಧ್ಯ ತುಂಬಿದ ಟೇಟ್ರಾ ಪ್ಯಾಕೆಟ್ ಗಳು ಇರುವುದು ಕಂಡು ಬಂದಿತ್ತು ಎಂದರೆ ಸರಿಯಲ್ಲ. ಆ ಬಗ್ಗೆ ಅಧಿಕಾರಿಗಳು ಆಟೋ ಚಾಲಕನನ್ನು ಕೇಳಲಾಗಿ ಯಾವುದೇ ಉತ್ತರ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಂತರ ಅಧಿಕಾರಿಗಳು ಅಲ್ಲಿಯೇ ನೆಲದ ಮೇಲೆ ಚೀಲವನ್ನು ಸುರಿದು ನೋಡಲಾಗಿ 1. 90 ಎಂ.ಎಲ್ ನ ರಾಜಾ ವಿಸ್ಕಿಯ 96 ಟೇಟ್ರಾ ಪ್ಯಾಕೆಟ್ ಗಳು, 2. 0.90 ಎಂ.ಎಲ್ ನ ಮಿಲಿಯ ಓರಿಜಿನಲ್ ಚಾಯ್ಸ್ ವಿಸ್ಕಿಯ 96 ಟೇಟ್ರಾ ಪ್ಯಾಕೆಟ್ ಗಳು ಇರುವುದು ಕಂಡು ಬಂದಿರುತ್ತದೆ ಎಂದರೆ ಸರಿಯಲ್ಲ. ಅವುಗಳಲ್ಲಿ ಒಟ್ಟು 17.280 ಲೀಟರ್ ಅಕ್ರಮ ಮಧ್ಯ ಇರುವುದು ಕಂಟು ಬಂದಿತ್ತು ಎಂದರೆ ಸರಿಯಲ್ಲ. ಸದರಿ ಟೇಟ್ರಾ ಪ್ಯಾಕೆಟ್ ಗಳ ಬಗ್ಗೆ ಸದರಿ ವ್ಯಕ್ತಿಯನ್ನು ವಿಚಾರಿಸಿದಾಗ ಸದರಿ ಮಧ್ಯದ ಟೇಟ್ರಾ ಪ್ಯಾಕೆಟ್ ಗಳನ್ನು ಹೆಚ್ಚಿನ ಬೆಲೆಗೆ ಮಾರಾಟ ಮಾಡುವ ಉದ್ದೇಶದಿಂದ ಸಂಗ್ರಹಿಸಿರುವುದಾಗಿ ತಿಳಿಸಿದನು ಎಂದರೆ ಸರಿಯಲ್ಲ. ನಂತರ ಸದರಿ ಮಧ್ಯದ ಟೇಟ್ರಾ ಪ್ಯಾಕೆಟ್ ಗಳಿಗೆ ಸಂಬಂಧಿಸಿದಂತೆ ಪರವಾನಿಗೆಯನ್ನು ಇದೆಯೇ ಎಂದು ಸದರಿ ವ್ಯಕ್ತಿಯನ್ನು ವಿಚಾರಿಸಿದಾಗ ಸದರಿ ವ್ಯಕ್ತಿ ಸರ್ಕಾರದಿಂದ

ದಿಃ 25.06.2025

ಯಾವುದೇ ಪರವಾನಿಗೆ ಪಡೆದಿರುವುದಿಲ್ಲ ಎಂದು ತಿಳಿಸಿದನು ಎಂದರೆ ಸರಿಯಲ್ಲ. ನಂತರ ಚಾಸಾ–8 ರವರು ಸರ್ಕಾರದ ಪರವಾನಿಗೆ ಇಲ್ಲದೇ ಮಧ್ಯ ಸಂಗ್ರಹಿಸಿಡುವುದು ಅಪರಾಧ ಎಂದು ಸದರಿ ವ್ಯಕ್ತಿಗೆ ತಿಳಿಸಿದರು ಎಂದರೆ ಸರಿಯಲ್ಲ. ಸದರಿ ಮಧ್ಯ ತುಂಬಿದ ಟೇಟ್ರಾ ಪ್ಯಾಕೆಟ್ ಗಳನ್ನು ಅದೇ ಚೀಲದಲ್ಲಿ ಹಾಕಿ ದಾರದಿಂದ ಕಟ್ಟಿ ಅರಗಿನಿಂದ ಸೀಲ್ ಮಾಡಿ ಎಲ್ಲಾ ಮಧ್ಯದ ಟೇಟ್ರಾ ಪ್ಯಾಕೆಟ್ ಗಳನ್ನು ರಾಸಾಯನಿಕ ಪರೀಕ್ಷೆಗಾಗಿ ಕಳುಹಿಸುವ ಸಲುವಾಗಿ ನಿಪಿ–5 ರಂತೆ ಅದೇ ದಿನ ಸಂಜೆ 07.20 ರಿಂದ 08.45 ರವರೆಗೆ ಅಬಕಾರಿ ಪೊಲೀಸರು ನನ್ನ ಮತ್ತು ಚಾಸಾ–2 ರವರ ಸಮಕ್ಷಮ ಅಮಾನತ್ತು ಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ದಿಃ18.08.2023 ರಂದು ಈ ಮೇಲೆ ಹೇಳಿದಂತೆ ನಿಪಿ–7 ರಂತೆ ಚಾಸಾ–9 ರವರ ಮುಂದೆ ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

ಆ ದಿನ ಆರೋಪಿಯ ವಶದಿಂದ ವಶಪಡಿಸಿಕೊಂಡ ಮತ್ತು ರಾಸಾಯನಿಕ ಪರೀಕ್ಷೆಗೆ ಕಳುಹಿಸಿದ 1. 90 ಎಂ.ಎಲ್ ನ ರಾಜಾ ವಿಸ್ಕಿಯ 96 ಟೇಟ್ರಾ ಪ್ಯಾಕೆಟ್ ಗಳು, 2. 0.90 ಎಂ.ಎಲ್ ನ ಮಿಲಿಯ ಓರಿಜಿನಲ್ ಚಾಯ್ಸ್ ವಿಸ್ಕಿಯ 96 ಟೇಟ್ರಾ ಪ್ಯಾಕೆಟ್‌ಗಳು ನ್ಯಾಯಾಲಯದ ಮುಂದೆ ಇರುವ ಟೇಟ್ರಾ ಪ್ಯಾಕೆಟ್ ಗಳೇ ಆಗಿರುತ್ತವೆ ಎಂದರೆ ಸರಿಯಲ್ಲ. ಆ ದಿನ ಆರೋಪಿಯನ್ನು ಚಾಸಾ–8 ರವರು ದಸ್ತಗಿರಿ ಕ್ರಮ ಅನುಸರಿಸಿ ದಸ್ತಗಿರಿ ಮಾಡಿರುತ್ತಾರೆ ಎಂದರೆ ಸರಿಯಲ್ಲ.

ನ್ಯಾಯಾಲಯದ ಮುಂದಿರುವ ಎಂ.ಓ.1 ನ್ನು ನನ್ನ ಮತ್ತು ಚಾಸಾ–2 ರವರ ಸಮಕ್ಷಮ ನಿಪಿ–5 ರಂತೆ ಮಹಜರ್ ನಂತೆ ಸದರಿ ಸ್ಥಳದಲ್ಲಿ ವಶಪಡಿಸಿಕೊಂಡರು ಎಂದರೆ ಸರಿಯಲ್ಲ. ಆರೋಪಿಗೆ ಸಹಾಯ ಮಾಡಲು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನನಗೆ ಎಲ್ಲಾ ಈ ಪ್ರಕರಣದ ಮಾಹಿತಿ ಇದ್ದರೂ ಸಹಾ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು: ಆರೋಪಿತರ ಪರವಾಗಿ : ಇರುವುದಿಲ್ಲ</u>

ಮರು ವಿಚಾರಣೆ :ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚುಪಡಿಸಿದೆ)

ಓ ಹೇ ಕೇ ಸರಿ ಇದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ, ಹೊಳಲ್ಕೆರೆ.